- ಬಡಾವಣೆ ವಿದ್ಯುದ್ದೀಕರಣಕ್ಕೆ ಸ್ವಯಂ ಆರ್ಥಿಕ ನೆರವಿನ ಅಡಿ ಸಿದ್ಧಪಡಿಸಿದ ಅಂದಾಜುಪಟ್ಟಿ ಮೊತ್ತ (ಕಾಮಗಾರಿ ಭಾಗ-1) - ರೂ. 13,04,322.00/-
- ಬಡಾವಣೆ ವಿದ್ಯುದ್ದೀಕರಣಕ್ಕೆ ಠೇವಣಿ ವಂತಿಕೆ ಯೋಜನೆ ಅಡಿ ಪರಿವರ್ತಕ ಕೇಂದ್ರದ ಅಂದಾಜುಪಟ್ಟಿ ಮೊತ್ತ (ಕಾಮಗಾರಿ ಭಾಗ-2) - ರೂ. -/-

**ಗ್ರಾಹಕರು ಪಾವತಿಸಬೇಕಾಗಿರುವ ಶುಲ್ಕಗಳು**

| ಕ್ರ.ಸಂ | ವಿವರಗಳು | ಲೆಕ್ಕ ಶಿರ್ಷಿಕೆ | ಪಾವತಿಸಬೇಕಾದ ಮೊತ್ತ |
|---|---|---|---|
| 1 | ಮೇಲ್ವಿಚಾರಣಾ ಶುಲ್ಕ ಶೇ.05 ರಷ್ಟು | 61-9047 | ರೂ. 63,966.00 |
| 2 | 18% ಜಿ.ಎಸ್.ಟಿ ಮೊತ್ತ ಮೇಲ್ವಿಚಾರಣಾ ಶುಲ್ಕಕ್ಕೆ | 46.491-2 | ರೂ. 11,514.00 |
| 3 | ಒಟ್ಟು ಅಂದಾಜು ಪಟ್ಟಿಯ ಮೊತ್ತಕ್ಕೆ ಶೇ.5 ರಷ್ಟು ಬಡಾವಣೆಗೆ ವಿದ್ಯುತ್ ಸೌಕರ್ಯ ಪರಿಪಾಲನೆ ಶುಲ್ಕ (ಒಂದು ಬಾರಿ) | 61-9067 | ರೂ. 65,216.00 |
| 4 | 18% ರಷ್ಟು ಜಿ.ಎಸ್.ಟಿ ಮೊತ್ತ ವಿದ್ಯುತ್ ಸೌಕರ್ಯ ಪರಿಪಾಲನೆ ಶುಲ್ಕಕ್ಕೆ | 46.491-2 | ರೂ. 11,738.00 |
| 5 | ಪರಿವರ್ತಕದ ಪರಿವೀಕ್ಷಣಾ ಶುಲ್ಕ | 63.930 | ರೂ. 1,000.00 |
| 6 | **GST** ಶುಲ್ಕ ಪರಿವರ್ತಕದ ಪರಿವೀಕ್ಷಣಾ ಶುಲ್ಕಕ್ಕೆ | 46.491-2 | ರೂ. 180.00 |

ರಂತೆ ಗ್ರಾಹಕರಿಂದ ಪಾವತಿಸಿಕೊಳ್ಳಲು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ಉಪವಿಭಾಗ, **ಬೆ.ವಿ.ಸ.ಕಂ., ಹರಿಹರ** ರವರಿಗೆ ಸೂಚಿಸಿದೆ ಹಾಗೂ ಹಣ ಪಾವತಿಯ ರಶೀದಿಗಳನ್ನು ಮತ್ತು ಇತರೆ ಅವಶ್ಯಕ ದಾಖಲೆಗಳನ್ನು ಈ ಕಛೇರಿಗೆ ಸಲ್ಲಿಸಿ ಅಂತಿಮ ಆದೇಶ ಪಡೆದ ನಂತರವೇ ಉದ್ದೇಶಿತ ಕಾಮಗಾರಿಯನ್ನು ನಿರ್ವಹಿಸತಕ್ಕದ್ದು.

**ಬಡಾವಣೆ ಮೂಲಭೂತ ಸೌಕರ್ಯ ವಿದ್ಯುದ್ದೀಕರಣದ ಸ್ವಯಂ ಆರ್ಥಿಕ ನಿರ್ವಹಣಾ ಯೋಜನೆ ಕಾಮಗಾರಿಗೆ ಈ ಕೆಳಗಿನ ನಿಬಂಧನೆಗೊಳಪಟ್ಟು ಷರತ್ತುಬದ್ಧ ಸೂಚನೆ ನೀಡಿದೆ.**

- ಈ ಕಾಮಗಾರಿಗಾಗಿ ಈ ಕಛೇರಿಯಿಂದ ಕಂಪನಿಯ ಯಾವುದೇ ಲೆಕ್ಕಶೀರ್ಷಿಕೆಯಲ್ಲಿ, ಯಾವುದೇ ಕಾರ್ಯಾದೇಶ ನೀಡಿರುವುದಿಲ್ಲ.
- ಈ ಕಾಮಗಾರಿಯಲ್ಲಿ ಬಳಸುವ ಎಲ್ಲಾ ಸಾಮಗ್ರಿಗಳು ಐ.ಎಸ್.ಐ ಹಾಗೂ ಬೆ.ವಿ.ಸ.ಕಂ ನಿರ್ದಿಷ್ಟ ಪಡಿಸಿರುವ ತಾಂತ್ರಿಕ ಗುಣಾಂಶಗಳಿಗೆ ಅನುಗುಣವಾಗಿರಬೇಕು.
- ಕಾಮಗಾರಿಯಲ್ಲಿ ಅಳವಡಿಸಿದ ಸಮಸ್ತ ಸಾಮಗ್ರಿಗಳಿಗೆ ವಿದ್ಯುತ್ ಸರಬರಾಜು ಪಡೆದ ದಿನಾಂಕದಿಂದ ಒಂದು ವರ್ಷದವರೆಗೆ ಖಾತರಿ (ಗ್ಯಾರಂಟಿ) ನೀಡತಕ್ಕದ್ದು.
- ಈ ಕಾಮಗಾರಿಯಲ್ಲಿ ಅಂದಾಜುಪಟ್ಟಿಯಲ್ಲಿ ತಿಳಿಸಿರುವ ಸಾಮಗ್ರಿಗಳನ್ನು ಬಳಸುವ ಮುನ್ನ ನಿಯೋಜಿತ ಬೆ.ವಿ.ಸ.ಕಂ. ಅಧಿಕಾರಿಗಳಿಂದ ಪೂರ್ವಭಾವಿ ತಪಾಸಣೆ ಹಾಗೂ ಅನುಮೋದನೆ ನಂತರವೇ ಅಳವಡಿಸಬೇಕು.
- ಪರಿವರ್ತಕ ಚಾಲನೆಗೊಳಿಸುವ ಪೂರ್ವದಲ್ಲಿ ವಿದ್ಯುತ್ ಪರಿವೀಕ್ಷಕರು, **ದಾವಣಗೆರೆ ರವರ** ಅನುಮೋದನೆ ಪಡೆದು ಉಪವಿಭಾಗ **ಹರಿಹರ** ರವರ ಹಾಗೂ ಈ ಕಛೇರಿಗೆ ಸಲ್ಲಿಸತಕ್ಕದ್ದು.
- ಮೇಲೆ ತಿಳಿಸಿದ ನಿಬಂಧನೆಗಳನ್ನು ಈ ಪತ್ರದ ದಿನಾಂಕದಿಂದ 90 (ತೊಂಭತ್ತು) ದಿನಗಳೊಳಗೆ ಅನುಸರಿಸದಿದ್ದರೆ ಈ ಮಂಜೂರಾತಿಯು ರದ್ದಾಗುವುದು.
- ಅಂದಾಜುಪಟ್ಟಿ ಪ್ರಕಾರ ಕಾಮಗಾರಿ ಸಂಪೂರ್ಣಗೊಂಡ ನಂತರ ಮುಖ್ಯ ಲೆಕ್ಕ ನಿಯಂತ್ರಕರು, ಕ.ವಿ.ಪ್ರ.ನಿ.ನಿ. ಬೆಂಗಳೂರು ರವರ ಸುತ್ತೋಲೆ ಸಂಖ್ಯೆ : ಲೆ.ಅ.ಎಸ್.ಹೆಚ್-4 : ಸಿ.ವೈ.ಎಸ್-10 : 92-93 : ದಿನಾಂಕ : 20.04.1992 ಕಂಪೆಂಡಿಯಂ ವಾಲ್ಯುಂ-1 ರ ಪುಟ ಸಂಖ್ಯೆ 246 ರಲ್ಲಿ ನಿಗದಿಪಡಿಸಿರುವಂತೆ ಕಾಮಗಾರಿ ಉಸ್ತುವಾರಿ ಅಧಿಕಾರಿಗಳ ಜಂಟಿ ಪರಿಶೀಲನೆ ಲೆಕ್ಕೀಕರಣದೊಂದಿಗೆ ಕಾಮಗಾರಿ ಸಾಮಗ್ರಿಗಳ ಹಾಗೂ ಕಾಮಗಾರಿಯ ಲೆಕ್ಕಾಚಾರವನ್ನು ಕಂಪನಿ ಲೆಕ್ಕ ಪುಸ್ತಕಕ್ಕೆ **"ಸ್ವತ್ತೆಂದು"** ದಾಖಲಿಸಿಕೊಳ್ಳಲಾಗುವುದು.

ಕಾರ್ಯನಿರ್ವಾಹಕ ಇಂಜಿನಿಯರ್ (ವಿ),
ಕಾರ್ಯ ಮತ್ತು ಪಾಲನೆ ವಿಭಾಗ,
ಬೆವಿಸಕಂ, ಹರಿಹರ

ಪ್ರತಿಗಳು:

1) ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ಉಪವಿಭಾಗ, ಬೆ.ವಿ.ಸ.ಕಂ., **ಹರಿಹರ** ರವರಿಗೆ ಕಾಮಗಾರಿಯಲ್ಲಿ ಅಳವಡಿಸುವ ಎಲ್ಲಾ ಸಾಮಗ್ರಿಗಳನ್ನು ಅಳವಡಿಸುವ ಮುನ್ನವೇ ತಪಾಸಿಸಿ ಅನುಮೋದನೆ ನೀಡುವ ಕ್ರಮ ಜರುಗಿಸಿ ಹಾಗೂ ಕಂಪನಿಯ ವಿದ್ಯುತ್ ಸರಬರಾಜಿನ ಅನ್ವಯಿಸುವ ಎಲ್ಲಾ ನಿಬಂಧನೆಗಳನ್ನು ಪಾಲಿಸುವ ಹಾಗೂ ಈ ಕಾಮಗಾರಿ ಅನುಮೋದನೆ ಪತ್ರದಲ್ಲಿ ತಿಳಿಸಿರುವ ಶುಲ್ಕಗಳನ್ನು ಪಾವತಿಸಿಕೊಳ್ಳುವ ಕ್ರಮವನ್ನು ಪಾಲಿಸಲು ಹಾಗೂ ಇತರೆ ಠೇವಣಾತಿಗಳನ್ನು ಗ್ರಾಹಕರಿಂದ ಪಡೆಯುವ ಕ್ರಮ ಜರುಗಿಸಿ, ಕಾಮಗಾರಿ ಪೂರ್ಣಗೊಂಡು ವಿದ್ಯುತ್ ಸರಬರಾಜು ನೀಡಿದ ನಂತರ ಅನುಪಾಲನೆ ವರದಿಯನ್ನು ಈ ಕಛೇರಿಗೆ ಸಲ್ಲಿಸಲು ಸೂಚಿಸಿದೆ.
2) ಶ್ರೀ.ಪರಮೇಶ್.ಎಸ್ ಬಿನ್ ಲೇಟ್ ಸಿರಿಗೆರೆ ಶಿವಾಜಿರಾವ್ ಯಾನೆ ಶಿವಪ್ಪ ಮತ್ತು ಶ್ರೀ.ಬಸವನಗೌಡ.ಎಂ.ಜಿ ಬಿನ್ ಎಂ.ಜಿ ಶಿವಪ್ಪ, ಮಿಟ್ಲಕಟ್ಟೆ, ಗ್ರಾಮ ರವರ ಮಾಹಿತಿಗೆ ಹಾಗೂ ಮುಂದಿನ ಕ್ರಮಕ್ಕಾಗಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ಉಪವಿಭಾಗ, **ಬೆ.ವಿ.ಸ.ಕಂ., ಹರಿಹರ** ರವರ ಕಛೇರಿಯನ್ನು ಸಂಪರ್ಕಿಸಲು ಕೋರಿದೆ.
3) ಕಛೇರಿ ಪ್ರತಿ/ಮು.ಕ.